ಪಡೆದವರೆಂದು ತಿಳಿದಿತ್ತಲ್ಲ... ಹಾಗಾಗಿ ಅವರನ್ನು ಭೇಟಿಯಾಗಿ ಅರಿಕೆ ಮಾಡಿದೆ.

ವೈದ್ಯೆ ಹೇಳಿದರು, ‘ಸುಶೀಲಮ್ಮ, ನೀವು ತಿಳಿದುಕೊಂಡಷ್ಟು ಈ ವ್ಯವಹಾರ ಸುಲಭವಲ್ಲ. ನೀವು ಸರೋಗೇಟ್ ಮದರ್ (ಬಾಡಿಗೆ ತಾಯಿ) ಆಗುವ ಮೊದಲು, ನಿಮ್ಮ ಗರ್ಭಕೋಶದ ಆರೋಗ್ಯ ಪರೀಕ್ಷೆಯಾಗಬೇಕು. ಅದಕ್ಕಾಗಿ ಹಲವು ಪರೀಕ್ಷೆಗಳಿಗೆ ನೀವು ಒಳಪಡಬೇಕು. ನಿಮ್ಮ ದೇಹಕ್ಕೆ ದಂಪತಿಗಳ ವೀರ್ಯ–ಅಂಡಾಣುಗಳು ಒಗ್ಗುತ್ತವೆಯೇ ಎಂದು ಖಚಿತಪಡಿಸಿಕೊಳ್ಳಬೇಕು. ಇದಲ್ಲದೆ ಹಲವು ನ್ಯಾಯಸಮ್ಮತ ನಿಬಂಧನೆಗಳಿಗೆ ನೀವು ಒಳಪಡಬೇಕು. ನೀವು ಯಾವ ದಂಪತಿಗೆ ಮಗುವನ್ನು ಹೆತ್ತು ಕೊಡುವಿರಿ ಎಂಬುದನ್ನು ನಿಮಗೆ ತಿಳಿಸುವುದಿಲ್ಲ. ಹುಟ್ಟುವ ಮಗು ಹೆಣ್ಣೋ ಗಂಡೋ ಎಂಬುದೂ ನಿಮಗೆ ತಿಳಿಸುವುದಿಲ್ಲ. ಹುಟ್ಟುವ ಮಗುವನ್ನು ಒಮ್ಮೆಯೂ ನಿಮಗೆ ತೋರಿಸದೆಯೇ ಅದರ ಅಧಿಕೃತ ಮಾತಾಪಿತೃಗಳಿಗೆ ನೀಡುತ್ತೇವೆ. ಇದಕ್ಕೆ ನೀವು ಒಪ್ಪಿ, ಮೊದಲೇ ಒಪ್ಪಂದ ಪತ್ರಕ್ಕೆ ಸಹಿ ಹಾಕಬೇಕು.

ದಂಪತಿಗಳಿಗೆ ನೀವ್ಯಾರೆಂದು ತಿಳಿದಿರುತ್ತದೆ. ಒಂಬತ್ತು ತಿಂಗಳೂ ನಿಮ್ಮ ಆರೋಗ್ಯಕ್ಕೆ ಅಗತ್ಯವಾದ ಆಹಾರ, ಹಣ್ಣು–ಹಂಪಲು, ಔಷಧಿಗಳನ್ನು ಅವರೇ ಒದಗಿಸುತ್ತಾರೆ. ಆದರೆ ನಿಮಗೆ ಅವರನ್ನು ಪರಿಚಯಿಸುವುದಿಲ್ಲ. ಈ ಎಲ್ಲಾ ನಿಬಂಧನೆಗಳಿಗೆ ನೀವು ಒಪ್ಪುವುದಾದರೆ ನಾನು ಇದಕ್ಕೆ ಸಂಬಂಧಪಟ್ಟ ಏಜೆಂಟರ ಮುಂದೆ ನಿಮ್ಮ ಅರಿಕೆ ಇಡುತ್ತೇನೆ’ ಎಂದರು ಆ ಸ್ತ್ರೀವೈದ್ಯರು.

ನಾನು ಸ್ವಲ್ಪ ಆಲೋಚಿಸಿ, ‘ಆಗಲಿ... ನಮ್ಮ ಮನೆಯವರ ಅಭಿಪ್ರಾಯ ಪಡೆದು ನಿಮಗೆ ತಿಳಿಸುತ್ತೇನೆ’ ಎನ್ನುತ್ತಾ ಹೊರಬಂದೆ. ನನ್ನ ಗಂಡ ನಾರಾಯಣಮೂರ್ತಿ ಮನೆಗೆ ಬಂದಾಗ ತುಂಬಾ ದಣಿದಿದ್ದರು. ರಾತ್ರಿ ಊಟವಾದ ನಂತರ, ಮಕ್ಕಳಿಬ್ಬರೂ ಇರುವಾಗಲೇ ಈ ವಿಚಾರ ಪ್ರಸ್ತಾಪಿಸಿದೆ. ನಾನು ಬಾಡಿಗೆ ತಾಯಿಯಾಗಲು ಅವರ್ಯಾರೂ ಅಡ್ಡಿಪಡಿಸಲಿಲ್ಲ. ಇದರಿಂದ ಮನೆಯ ಆರ್ಥಿಕ ಸ್ಥಿತಿ ಸುಧಾರಿಸುವುದೆಂಬ ಆಸೆ ಎಲ್ಲರಿಗೂ ಇತ್ತು. ಹಾಗಾಗಿ ಬೇಗ ಒಪ್ಪಿಕೊಂಡರು. ಭಾರತದಲ್ಲಿ ಬಾಡಿಗೆ ತಾಯಿಗೆ ಹದಿನೈದರಿಂದ ಇಪ್ಪತ್ತು ಲಕ್ಷಗಳವರೆಗೆ ಬೆಲೆ ಕಟ್ಟಲಾಗುತ್ತಿದೆ ಎಂದು ನಮಗೆ ತಿಳಿಯಿತು. ಮರುದಿನವೇ ವೈದ್ಯರಿಗೆ ನನ್ನ ಸಮ್ಮತಿ ತಿಳಿಸಿದೆ.

***

ಒಂದು ವಾರದೊಳಗೆ ವೈದ್ಯರಿಂದ ನನಗೆ ಕರೆ ಬಂತು. ಓರ್ವ ದಂಪತಿ ಈ ವ್ಯವಹಾರಕ್ಕೆ ಆಸಕ್ತಿ ತೋರಿರುವುದಾಗಿ ತಿಳಿಸಿದರು. ನನ್ನನ್ನು ಪರೀಕ್ಷೆಗೆ ಒಳಪಡಿಸಿ ವೈದ್ಯರು ನನ್ನ ಗರ್ಭಾಶಯದ ಆರೋಗ್ಯವನ್ನು ಪರಿಶೀಲಿಸಿದರು. ನನಗೆ ರಕ್ತಹೀನತೆ, ರಕ್ತದೊತ್ತಡ, ಮಧುಮೇಹಾದಿ ತೊಂದರೆಗಳು ಇಲ್ಲ ಎನ್ನುವುದನ್ನು ಖಚಿತಪಡಿಸಿಕೊಂಡರು.

ನಾನು ಒಂದು ವಾರ ಶಾಲೆಯ ಕೆಲಸಕ್ಕೆ ರಜೆ ಬರೆದುಕೊಟ್ಟು ಈ ಗರ್ಭಧಾರಣೆ ಪ್ರಕ್ರಿಯೆಗೆ ಒಡ್ಡಿಕೊಂಡೆ. ‘ಗೆಸ್ಟೇಷನಲ್ ಸರೋಗೆಸಿ’ ಎನ್ನುವುದು ನ್ಯಾಯಸಮ್ಮತವಾದ ಪ್ರಕ್ರಿಯೆ. ದಂಪತಿಗಳ



ವೀರ್ಯಾಣು ಹಾಗೂ ಅಂಡಾಣುಗಳನ್ನು ಒಟ್ಟುಗೂಡಿಸಿ ‘ಇನ್‌ವಿಟ್ರೊ ಫರ್ಟಿಲೈಸೇಷನ್’ ಮಾಡಲು ‘ಡಿಶ್’ನಲ್ಲಿಟ್ಟು, ಅದು ಭ್ರೂಣವಾದ ನಂತರ ಬಾಡಿಗೆ ತಾಯಿಯ ಗರ್ಭಕೋಶದಲ್ಲಿ ನೆಡಲಾಗುತ್ತದೆ. ಅದೃಷ್ಟವಶಾತ್, ನನಗೆ ಗರ್ಭ ಕಚ್ಚಿಕೊಂಡದ್ದು ನಮಗೂ, ಕೊಟ್ಟ ದಂಪತಿಗೂ ಸಿಹಿಸುದ್ದಿ.

ಒಪ್ಪಂದದ ಹಣದಲ್ಲಿ ಅರ್ಧಭಾಗವನ್ನು ನನ್ನ ಬ್ಯಾಂಕ್ ಖಾತೆಗೆ ಮುಂಗಡವಾಗಿಯೇ ಜಮಾ ಮಾಡಿದ್ದರು ಆ ದಂಪತಿ. ಇದರಲ್ಲೂ ಬಾಡಿಗೆ ತಾಯಂದಿರಿಗೆ ಮೋಸ ನಡೆಯುವುದೆಂದು ಕೇಳಿದ್ದೆ. ಶಿಶು ಹೆತ್ತು ಕೊಟ್ಟ ಮೇಲೆ ಪೂರ್ತಿ ಹಣ ನೀಡದೇ ಹೋಗುವ ಸಂದರ್ಭಗಳೂ ಇವೆಯಂತೆ. ಆದಷ್ಟು ಹಾಗಾಗದಂತೆ ಮಧ್ಯವರ್ತಿ ‘ಏಜೆನ್ಸಿ’ಗಳೂ ಯತ್ನಿಸುತ್ತವೆ.

ನಾನು ಗರ್ಭ ಧರಿಸಿದ ದಿನಗಳಲ್ಲಿ ನನ್ನಲ್ಲೇನೋ ಒಂದು ಅಪೂರ್ವ ಪುಳಕ, ಅತೀವ ಆನಂದ! ಮಗು ಒಳಗಿನಿಂದ ಒದೆಯುವಾಗ, ಮಿಸುಕಾಡುವಾಗ ನನಗಾಗುತ್ತಿದ್ದ ಸಂತೋಷವನ್ನು ಮಕ್ಕಳು ಹಂಚಿಕೊಳ್ಳುತ್ತಿದ್ದರು. ಈ ಅನುಭವ ವರ್ಣನಾತೀತ. ಆದರೆ ನನ್ನ ಗರ್ಭ ಹೊರಗೆ ಕಾಣತೊಡಗಿದಾಗ ಅಕ್ಕಪಕ್ಕದವರಿಗೆ ನಾನು ಬಾಡಿಗೆ ತಾಯಿ ಎಂದು ವಿಷಯ ತಿಳಿದಾಗ ಆಳಿಗೊಂದು ಮಾತನ್ನು ಆಡಲಾರಂಭಿಸಿದರು. ಹಣಕ್ಕಾಗಿ ನಾನು ವ್ಯಭಿಚಾರ ಮಾಡಿದೆ ಎನ್ನುವಂತೆ ಮಾತನಾಡುವವರೂ ಇದ್ದರು. ಉದಾತ್ತ ಸಮಾಜಸೇವೆ ಎಂದು ಹೊಗಳುವವರೂ ಇದ್ದರು. ನಾನಾಗಲೀ, ನನ್ನ ಕುಟುಂಬವಾಗಲೀ ಇದ್ಯಾವುದಕ್ಕೂ ಕಿವಿ ಕೊಡದಂತಿದ್ದೆವು.

ನವಮಾಸಗಳು, ನನಗೆ ಅತೀವ ಸುಖವನ್ನು ನೀಡಿತ್ತು ಈ ಗರ್ಭ. ಬೇಕೆನಿಸಿದ್ದನ್ನು ‘ಬಯಕೆ’ಯೆಂದು ತಿಂದುಂಡು, ಉಟ್ಟು–ತೊಟ್ಟು ಆನಂದಿಸಿದೆ. ನನ್ನೊಂದಿಗೆ ನನ್ನ ಮಕ್ಕಳೂ ಆ ಸಂಭ್ರಮದಲ್ಲಿ ಪಾಲ್ಗೊಂಡರು. ನಾನು ಆರೋಗ್ಯವಾಗಿದ್ದೆನಾದ್ದರಿಂದ ಶಾಲೆಯ ಕೆಲಸಕ್ಕೆ ಹೋಗುತ್ತಲೇ ಇದ್ದೆ.

ಗರ್ಭದ ಅವಧಿ ಮುಗಿಯುತ್ತಿದ್ದಂತೆ ನಾನು ಆಸ್ಪತ್ರೆ ಸೇರಿದೆ. ಹೆರಿಗೆಯನ್ನು ಬಹಳ ಗೌಪ್ಯವಾಗಿ ನಡೆಸಿದರು. ಒಪ್ಪಂದದಂತೆ ಮಗುವನ್ನು ನನಗಾಗಲೀ, ನನ್ನ ಪತಿಗಾಗಲೀ ತೋರಿಸದೆಯೇ ಅದರ ಅಧಿಕೃತ ಮಾತಾಪಿತೃಗಳಿಗೆ ಕೊಟ್ಟುಬಿಟ್ಟರು ವೈದ್ಯರು. ಅವರೆಗೂ ನನ್ನ ಹೊಕ್ಕಳಬಳ್ಳಿಯಿಂದ ಆಹಾರವನ್ನು ಪಡೆಯುತ್ತಿದ್ದ, ನನ್ನದೇ ಜೀವದ ಒಂದು ಭಾಗವೆನಿಸಿದ್ದ ನನ್ನ ಕಂದ ಇನ್ನು ಮುಂದೆ ನನ್ನದಲ್ಲ ಎಂಬ ಭಾವವೇ ನನಗೆ ಆಘಾತ ತಂದಿತು. ಎದೆ ತುಂಬಾ ತುಂಬಿಕೊಂಡ ಹಾಲು ಉಕ್ಕಿ ಹರಿದು ಕುಪ್ಪಸ ತೊಯ್ದಾಗ, ಮಾತೃಭಾವ ಜಾಗೃತವಾಗಿ, ಕಣ್ಣೀರೂ ಧಾರೆಯಾಗಿ ಸುರಿಯಿತು.

ಆಗ ನನ್ನ ಸಂಕಟವನ್ನು ಅರಿತುಕೊಂಡವರು ನನ್ನ ಗಂಡ–ಮಕ್ಕಳು. ನನ್ನ ಮಾನಸಿಕ–ದೈಹಿಕ ನೋವು ಕಡಿಮೆಯಾಗುವಂತೆ ನನ್ನನ್ನು ರಮಿಸಿದರು. ಒಪ್ಪಿಕೊಂಡಂತೆ ಮಿಕ್ಕ ಹಣವೂ ನನ್ನ ಬ್ಯಾಂಕ್ ಖಾತೆಗೆ ಜಮಾ ಆಯಿತು. ಆ ಮಗುವಿನ ಮಾತಾಪಿತೃಗಳು, ವೈದ್ಯರ ಮೂಲಕ, ನನಗೆ, ನನ್ನ ಮನೆಯವರಿಗೆಲ್ಲಾ ಬೆಲೆ ಬಾಳುವ ಉಡುಗೊರೆಗಳನ್ನಿತ್ತು ಗೌರವಿಸಿದರು.

ಕಾಲ ಸರಿದಂತೆ, ನನ್ನ ಎದೆಯುಮ್ಮಳ ಕಡಿಮೆಯಾಯ್ತು. ನಾನು ಎಂದಿನಂತೆ ನನ್ನ ಕೆಲಸ ಕಾರ್ಯಗಳಲ್ಲಿ ಮೈಮರೆತೆ. ಕೈಗೆ ಬಂದಿದ್ದ ಹಣ ನನ್ನ ಸಂಸಾರದ ಅವಶ್ಯಕತೆಗಳನ್ನು ಪೂರೈಸಿತ್ತು. ಗಂಡ ಮಕ್ಕಳೊಂದಿಗೆ ನಾನು ಒಳ್ಳೆಯ ಜೀವನ ನಡೆಸತೊಡಗಿದೆ.

***

ಅಂದು ಸೆಪ್ಟೆಂಬರ್ ಎರಡನೇ ತಾರೀಕು. ನಾನು ಬೇಗನೆದ್ದು ತಲೆಗೆ ಮಿಂದು ಸಿದ್ಧಳಾದೆ. ಮಕ್ಕಳು ಶಾಲೆಗೆ ಹೋಗುವಾಗ, ನಾನೂ ಶಾಲೆಗೆ ಹೋಗುತ್ತಿದ್ದೆ. ಆ ದಿನ ಆಟೊ ಹತ್ತುವಾಗ ಹೇಳಿದೆ, ‘ನನ್ನನ್ನು ದೇವಸ್ಥಾನದ ಬಳಿ ಇಳಿಸಿಬಿಡಿ’.

‘ಇದೇಕೆ ಸುಶೀಲಾ, ಇವತ್ತು ನೀನು ಶಾಲೆಗೆ ಹೋಗೋಲ್ವೆ?’ ಪತಿ ಕೇಳಿದರು.

‘ಯಾಕಮ್ಮ ದೇವಸ್ಥಾನಕ್ಕೆ? ಇವತ್ತು ಯಾರದ್ದಾದರೂ ಹುಟ್ಟಿದಹಬ್ಬವೇ?’ ಎಂದು ಕೇಳಿದರು ಮಕ್ಕಳು. ಅವರಿಬ್ಬರ ಹುಟ್ಟುಹಬ್ಬಕ್ಕೆ ನಾನು ಈ ರೀತಿ ದೇವಾಲಯಕ್ಕೆ ಬಂದು ಪೂಜೆ ಮಾಡಿಸುತ್ತಿದ್ದುದ್ದು ಅವರಿಗೆ ತಿಳಿದಿತ್ತು.

ನಾನು ಪತಿಯ ಮುಖ ನೋಡುತ್ತಾ ಹೇಳಿದೆ, ‘ಶಾಲೆಗೆ ಅರ್ಧ ದಿನ ರಜೆ ಕಳುಹಿಸಿದ್ದೇನೆ. ಇವತ್ತು ಸೆಪ್ಟೆಂಬರ್ ಎರಡು; ನನ್ನ ಮೂರನೇ ಮಗುವಿನ ಮೊದಲ ಹುಟ್ಟುಹಬ್ಬ ಅಲ್ಲವೇ? ಗಂಡೋ ಹೆಣ್ಣೋ ತಿಳಿಯದಿದ್ದರೂ, ಆ ನನ್ನ ಕಂದ ಎಲ್ಲಿದ್ದರೂ ಆರೋಗ್ಯದಿಂದಿರಲಿ, ಪ್ರವರ್ಧಮಾನಕ್ಕೆ ಬರಲಿ ಎಂದು ‘ಹೆತ್ತವಳು’ ನಾನು ಹಾರೈಸಬಾರದೇ? ಇವತ್ತು ದೇವರ ಹೆಸರಿಗೇ ಒಂದು ಅರ್ಚನೆ ಮಾಡಿಸಿ, ವೈದ್ಯರ ಮೂಲಕ ಪ್ರಸಾದವನ್ನು ಆ ಮಗುವಿಗೆ ಕಳುಹಿಸುತ್ತೇನೆ. ಮಗುವಿಗೆ ಜೀವರಸ ನೀಡುವ ಹೊಕ್ಕಳಬಳ್ಳಿ ಕತ್ತರಿಸಿಹೋದ ಮಾತ್ರಕ್ಕೆ ನನ್ನ ಮತ್ತು ನನ್ನ ಕಂದನ ಸಂಬಂಧ ಹರಿದುಹೋಗುವುದೇ? ಅದು ನಾನಿರುವವರೆಗೂ ಉಳಿಯುವ ಶಾಶ್ವತವಾದ ಬಂಧವಲ್ಲವೇ?’ ಎಂದೆ, ಕಣ್ಣಂಚಿನಲ್ಲಿ ತುಂಬಿದ ಕಣ್ಣೀರೊರೆಸುತ್ತಾ.

ಪ್ರತಿಕ್ರಿಯಿಸಿ: **feedback@sudha.co.in**